**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**

**ಪ್ರಕರಣ ಸಂಖ್ಯೆಃ ಸ್ಪೆಷಲ್ ಕೇಸ್ 85/2013**

**ದಿನಾಂಕಃ 14.09.2022**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**

**ಪ್ರಾ.ಸಾಃ 10 (ಚಾ.ಸಾ.21)**

| | | |
|---|---|---|
| **ಹೆಸರು** | **ಃ** | **ಸೈಯದ್ ನಿಜಾಮುದ್ದೀನ್** |
| **ತಂದೆಯ ಹೆಸರು** | **ಃ** | **ಲೇ.ಸೈಯದ ಮಹಬೂಬ್** |
| **ವಯಸ್ಸು** | **ಃ** | **67 ವರ್ಷ** |
| **ಉದ್ಯೋಗ** | **ಃ** | **ನಿವೃತ್ತ ಡಿವೈಎಸ್‌ಪಿ, ರಾಮನಗರ ಲೋಕಾಯುಕ್ತ** |
| **ವಾಸ ಸ್ಥಳ** | **ಃ** | **ಬೆಂಗಳೂರು** |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ತಾಃ **09.06.2011** ರಿಂದ ತಾಃ **30.09.2013** ರವರೆಗೆ ರಾಮನಗರದ ಲೋಕಾಯುಕ್ತ ಕಚೇರಿಯಲ್ಲಿ ಡಿವೈಎಸ್‌ಪಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

**2.** ತಾಃ **15.06.2011** ರಂದು ಚಾಸಾ.**20** ರವರಿಂದ ಪ್ರಕರಣದ ಕಡತವನ್ನು ಪಡೆದುಕೊಂಡು, ಕಡತವನ್ನು ಪರಶೀಲಿಸಿರುತ್ತೇನೆ. ತಾಃ **20.06.2011** ರಂದು ಚಾಸಾ.**15** ರವರ ಹೇಳಿಕೆ ಪಡೆದಿರುತ್ತೇನೆ. ತಾಃ **05.12.2011** ರಂದು ತಿಮ್ಮಪ್ಪ, ಡೆಪ್ಯೂಟಿ ತಹಶೀಲ್ದಾರ್, ಸಾತನೂರು ಇವರ ಹೇಳಿಕೆ ಪಡೆದಿರುತ್ತೇನೆ. ತಾಃ **09.04.2012** ರಂದು ಚಾಸಾ.**13** - ನಾಗರಾಜು, ತಹಶೀಲ್ದಾರ್, ಮದ್ದೂರು ತಾಲ್ಲೂಕು ಇವರ ಹೇಳಿಕೆ ಪಡೆದಿರುತ್ತೇನೆ.

**3.** ತಾಃ **14.12.2012** ರಂದು ಪಿರ್ಯಾದಿ ಮತ್ತು **1** ನೇ ಆರೋಪಿ - ನಾಗರಾಜು ಇವರ ಮಧ್ಯೆ ಆದ ಸಂಭಾಷಣೆಯ ಬಗ್ಗೆ ಫೋನ್ ಕಾಲ್ ಡೀಟೇಲ್ಸ್ ಪಡೆದಿರುತ್ತೇನೆ.

**4.** ತಾಃ **11.04.2012** ರಂದು ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ.**22** – ಅನಿಲ್, ಪಿಐ, ಲೋಕಾಯುಕ್ತರವರಿಗೆ ವಹಿಸಿಕೊಟ್ಟೆನು.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ವಿಎಂ., ವಕೀಲರಿಂದಃ</u>**

5. ಹಿಂದೆ ಮಾಡಿದ ತನಿಖೆಯ ಬಗ್ಗೆ ಪರಿಶೀಲನೆ ಮಾಡಿದ್ದೀರಾ ಅಂದರೆ ಮಾಡಿದ್ದೇನೆ. ಚಾಸಾ.13 – ವಿ.ನಾಗರಾಜು, ತಹಶೀಲ್ದಾರರವರು ತಾಃ30.10.2010 ರಂದು ನಮೂನೆ - 21 ಪ್ರಚುರುಪಡಿಸಿದ ನಂತರ ಪ್ರಚೂರಪಡಿಸಿದ ಅವಧಿ ಕಳೆದ ಮೇಲೆ ಗಣಕೀಕೃತ ಶಾಖೆಯಲ್ಲಿ ಜೇಷ್ಠತಾ ಪದ್ಧತಿ ಅಂದರೆ ಮೊದಲ ಅರ್ಜಿ, ಮೊದಲು ವಿಲೇವಾರಿ ಇದು ಸರ್ಕಾರದ ಗಣಕೀಕೃತ ಶಾಖೆಯ ನೀತಿಯಾಗಿದ್ದು, ಈ ನೀತಿಯನ್ನು ಅನುಸರಿಸಿ, ಅಂತಿಮವಾಗಿ ರಾಜಸ್ವ ನಿರೀಕ್ಷಕರು, ತಾಃ 06.12.2010 ರಂದು ಖಾತೆಯನ್ನು ಅರ್ಜಿದಾರರ ಹೆಸರಿಗೆ ಖಾತೆ ಮಾಡಲು ಅಂಗೀಕರಿಸಿರತ್ತಾರೆ ಮತ್ತು ಅರ್ಜಿದಾರರ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ ಎಂದು ಹೇಳಿಕೆ ಕೊಟ್ಟಿರುತ್ತಾರೆ ಅಂದರೆ ಸರಿ.

6. ಕೆಲಸದ ಮುಗಿದ ಮೇಲೆ ಕಡತವನ್ನು ಮಾಗಡಿ ತಹಶೀಲ್ದಾರರವರವ ಕಚೇರಿಗೆ ಕಳುಹಿಸಿರುತ್ತಾರೆ ಅಂದರೆ ಸರಿ. ಹಾಗಾಗಿ ಅವರ ಹತ್ತಿರ ಯಾವುದೇ ಕೆಲಸ ಬಾಕಿ ಇರಲಿಲ್ಲ ಅಂದರೆ ಸರಿಯಲ್ಲ. ನಾನು ಮೇಲೆ ಹೇಳಿದ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಅಂದರೆ ಸರಿಯಲ್ಲ.

7. 1 ನೇ ಆರೋಪಿಯ ಹತ್ತಿರ ಯಾವುದೇ ಕೆಲಸ ಬಾಕಿ ಇರಲಿಲ್ಲ, ಅವರು ತಮ್ಮ ಕೆಲಸವನ್ನು ಮುಗಿಸಿ ಕಡತವನ್ನು ತಹಶೀಲ್ದಾರರ ಕಚೇರಿಗೆ ಕಳುಹಿಸಿಕೊಟ್ಟಿದ್ದರು ಅಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**
**<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**